# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ. ಕಾಂತರಾಜ್ (ಬಿಎಂಎಲ್)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 328

ಉತ್ತರಿಸಬೇಕಾದ ದಿನಾಂಕ : 14.09.2021

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸಹಕಾರ ಇಲಾಖೆ ವ್ಯಾಪ್ತಿಯಲ್ಲಿ ಬರುವ ಅಪೆಕ್ಸ್‌ಗಳಾವುವು: (ವಿವರವಾದ ಮಾಹಿತಿ ನೀಡುವುದು) | ಸಹಕಾರ ಇಲಾಖೆ ವ್ಯಾಪ್ತಿಯಲ್ಲಿ ಬರುವ ಅಪೆಕ್ಸ್‌ಗಳ ವಿವರ ಈ ಕೆಳಕಂಡಂತಿರುತ್ತದೆ.<br>1. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ನಂ.32, 3ನೇ ಅಂತಸ್ತು, ಡಿ.ದೇವರಾಜ ಅರಸು ರಸ್ತೆ, (ರೇಸ್ ಕೋರ್ಸ್ ರಸ್ತೆ), ಬೆಂಗಳೂರು-560001.<br>2. ಕರ್ನಾಟಕ ರಾಜ್ಯ ಸಹಕಾರ ತೆಂಗಿನ ನಾರಿನ ಮಹಾಮಂಡಳ ನಿ.,3ನೇ ಮಹಡಿ, ಜಿಲ್ಲಾ ಕೈಗಾರಿಕ ಕೇಂದ್ರದ ಕಟ್ಟಡ, ರಾಜಾಜಿನಗರ ಕೈಗಾರಿಕಾ ವಸಾಹತು. ಬೆಂಗಳೂರು.<br>3. ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಮತ್ತು ಕೈಮಗ್ಗ ನೇಕಾರರ ಮಹಾಮಂಡಳ ನಿ., ನಂ.147, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.<br>4. ಕರ್ನಾಟಕ ರಾಜ್ಯ ಸಹಕಾರ ನೂಲಿನ ಗಿರಣಿಗಳ ಮಹಾಮಂಡಳ ನಿ. ನಂ.132, 1ನೇ ಮಹಡಿ, ಕೆ.ಹೆಚ್.ರಸ್ತೆ, ಬೆಂಗಳೂರು-560027.<br>5. ಕರ್ನಾಟಕ ರಾಜ್ಯ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಮಹಾಮಂಡಳ ನಿ., ನಂ.ಸಿ.17 & 18, 2ನೇ ಮಹಡಿ, ಕೆಂಪೇಗೌಡ ಕಮರ್ಷಿಯಲ್ ಆರ್ಕೇಡ್, ಕೆ.ಜಿ.ರಸ್ತೆ, ಬೆಂಗಳೂರು-560 009.<br>6. ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಳ ನಿ., ಕುರಿಭವನ, ಹೆಬ್ಬಾಳ, ಬೆಂಗಳೂರು-560024.<br>7. ಕರ್ನಾಟಕ ರಾಜ್ಯ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾಮಂಡಳ ನಿ.,ನಂ.58, 1ನೇ ಮುಖ್ಯರಸ್ತೆ, ದೇವಸ್ಥಾನದ ಬೀದಿ, ಮಲ್ಲೇಶ್ವರಂ, ಬೆಂಗಳೂರು-560003.<br>8. ಕರ್ನಾಟಕ ರಾಜ್ಯ ಉಣ್ಣೆ ಕೈಮಗ್ಗದ ನೇಕಾರರ ಖಾದಿಯೇತರ ಸಹಕಾರ ಸಂಘಗಳ ಮಹಾಮಂಡಳ ನಿ., ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.<br>9. ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳ ನಿ., ಕೆ.ಹೆಚ್.ರಸ್ತೆ, ಬೆಂಗಳೂರು-560 027.<br>10. ಕರ್ನಾಟಕ ರಾಜ್ಯ ರೇಷ್ಮೇ ಸಹಕಾರ ಮಾರಾಟ ಮಹಾಮಂಡಳ ನಿ., ನಂ.103, ಅವಿನ್ಯೂ ರಸ್ತೆ, ಬೆಂಗಳೂರು-560002.<br>11. ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಮಹಾಮಂಡಳ ನಿ., ನಂ.ಸಿ.17 & 18, 2ನೇ ಮಹಡಿ, ಕೆಂಪೇಗೌಡ ಕಮರ್ಷಿಯಲ್ ಆರ್ಕೇಡ್, ಕೆ.ಜಿ.ರಸ್ತೆ, ಬೆಂಗಳೂರು-560 009.<br>12. ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ. ನಂ.1,"ಉತ್ತುಂಗ" ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ ಬೆಂಗಳೂರು-18<br>13. ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧೀ ಬ್ಯಾಂಕ್ ನಿ. 6/1, ಟಿಪ್ಪುಸುಲ್ತಾನ್ ಪ್ಯಾಲೇಸ್ ರಸ್ತೆ, ಚಾಮರಾಜ ಪೇಟೆ ಬೆಂಗಳೂರು-18<br>14. ಕರ್ನಾಟಕ ರಾಜ್ಯ ಸಹಕಾರ ಲ್ಯಾಂಪ್ಸ್ ಮಹಾಮಂಡಳ ನಿ, ಫಾಟ್ |

| | | |
|---|---|---|
| | | ನಂ.431ಎ, ಹೆಬ್ಬಾಳ ಕೈಗಾರಿಕಾ ಪ್ರದೇಶ, ಪಿಯೆಟ್ ಕಾಲೇಜು, ಎದುರು, ಮೈಸೂರು.<br>15. ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳ ನಿ, ನಂ,37/ಬಿ, ಮತ್ಸ್ಯ ಭವನ, 1ನೇ ಹಂತ, ಕೈಗಾರಿಕಾ ಉಪ ನಗರ, ವಿಶ್ವೇಶ್ವರಯ್ಯ ನಗರ, ಮೈಸೂರು-08<br>16. ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿ, ನಂ.52, ಕ್ವೀನ್ಸ್ ರಸ್ತೆ, ದುಂಡು ಪಶು ಆಸ್ಪತ್ರೆ ಆವರಣ, ಬೆಂಗಳೂರು-52<br>17. ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ ನಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು<br>18. ಕರ್ನಾಟಕ ರಾಜ್ಯ ಸಹಕಾರ ಚಲನಚಿತ್ರ ಮತ್ತು ಲಲಿತಕಲಾ ಮಹಾಮಂಡಳ ನಿ, ನಂ525, 10ನೇ ಮುಖ್ಯರಸ್ತೆ, 5ನೇ ಬ್ಲಾಕ್, ಜಯನಗರ, ಬೆಂಗಳೂರು<br>19. ದಿ ಕರ್ನಾಟಕ ರಾಜ್ಯ ಟೈಲರ್ಸ್ ಕೋ-ಆಪರೇಟಿವ್ ಫೆಡರೇಷನ್ ಲಿ, ನಂ92/ಎ, 2ನೇ ಮೇನ್ ರೋಡ್, ಶೇಷಾದ್ರಿ ಪುರಂ, ಬೆಂಗಳೂರು.<br>20. ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಳ ನಿ, ನಂ.3, ಎಸ್.ಕರಿಯಪ್ಪ ರಸ್ತೆ, ಬಸವನಗುಡಿ ಬೆಂಗಳೂರು-04.<br>21. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ, ಬೆಂಗಳೂರು.<br>22. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ, ಬೆಂಗಳೂರು<br>23. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ನಿರ್ಮಾಣ ಭವನ, ಡಾ:ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.<br>24. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು<br>25. ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿ., ಬೆಂಗಳೂರು<br>26. ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ., ಬೆಂಗಳೂರು<br>27. ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕೆ ಮಾರಾಟ ಮಹಾಮಂಡಳ ನಿ., ಬೆಂಗಳೂರು<br>28. ಕರ್ನಾಟಕ ರಾಜ್ಯ ಸಹಕಾರ ಸಾವಯವ ಕೃಷಿ ಉತ್ಪನ್ನಗಳ ಮಾರಾಟ ಮಹಾಮಂಡಳ ನಿ., ಬೆಂಗಳೂರು |
| ಆ | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಇದನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಇದರ ಧೇಯೋದ್ದೇಶಗಳೇನು; ಇದರ ವ್ಯಾಪ್ತಿಯಲ್ಲಿ ಬರುವ ಇತರೆ ಸಂಸ್ಥೆಗಳು ಯಾವುವು (ಮಾಹಿತಿಯನ್ನು ನೀಡುವುದು) | ಸಹಕಾರ ತತ್ವ ಪ್ರಚಾರಕ್ಕಾಗಿ ಹಾಗೂ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಅಗತ್ಯವಾದ ಶಿಕ್ಷಣ ನೀಡುವ ಉದ್ದೇಶದಿಂದ ದಿನಾಂಕ:27.08.1924ರಂದು ಸಹಕಾರ ಸಂಸ್ಥೆಯನ್ನು ಸ್ಥಾಪಿಸಲಾಯಿತು ನಂತರ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಸಂ: ಪಿಎಸಿ/ಆರ್‌ಜಿಎನ್/8/15585/87-88 ದಿನಾಂಕ: 22.04.1987 ರಲ್ಲಿ ನೋಂದಣಿಯಾಗಿ ಸ್ಥಾಪನೆಗೊಂಡಿರುತ್ತದೆ.<br><br>ಧ್ಯೇಯೋದ್ದೇಶಗಳು:<br><br>ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ರಾಜ್ಯದ ಸಹಕಾರ ಸಂಘ/ಸಂಸ್ಥೆಗಳಿಗೆ ಸಹಕಾರ ಚಳುವಳಿ ಕುರಿತು ಶಿಕ್ಷಣ, ತರಬೇತಿ ಮತ್ತು ಪ್ರಚಾರ ಕಾರ್ಯಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಸ್ಥಾಪನೆಗೊಂಡು, ಮಹಾಮಂಡಳದ ಉಪವಿಧಿ ಸಂಖ್ಯೆ: 4 ರನ್ವಯ ಈ ಕೆಳಕಂಡಂತೆ ಉದ್ದೇಶಗಳನ್ನು ಹೊಂದಿರುತ್ತದೆ. |

| | | | |
|---|---|---|---|
| | | (i) | ಜಾತಿ, ಪಂಥ ಮತ್ತು ಮತಗಳನ್ನು ಪರಿಗಣಿಸದೆ ಎಲ್ಲಾ ವರ್ಗದವರಿಗೆ ಸಹಕಾರ ಚಳುವಳಿಯ ಪ್ರಯೋಜನಗಳು ಲಭ್ಯವಾಗುವಂತೆ ಅದರ ಹಿತ ಕಾಪಾಡಲು ಮತ್ತು ಸಹಕಾರ ಚಳುವಳಿಯ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ದೃಷ್ಟಿಯಿಂದ ರಾಜ್ಯದ ಸಹಕಾರ ಚಳುವಳಿಯ ಅಧಿಕೃತ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುವುದು. |
| | | (ii) | ರಾಜ್ಯದ ಎಲ್ಲಾ ಸಹಕಾರ ಸಂಸ್ಥೆಗಳು ಸಹಕಾರ ತತ್ವ ಮತ್ತು ಆಚರಣೆಗಳನ್ನು ಅಳವಡಿಸಿಕೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳುವ ಉದ್ದೇಶದಿಂದ ಪ್ರಚಾರ ನಡೆಸುವುದು. |
| | | (iii) | ಸಹಕಾರ ಸಂಸ್ಥೆಗಳ ನೌಕರರಿಗೆ, ಸಹಕಾರ ಇಲಾಖೆಯ ನೌಕರರಿಗೆ ಮತ್ತು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ನೌಕರರಿಗೆ ತರಬೇತಿ ನೀಡುವುದು. ಸಹಕಾರ ಸಂಘಗಳ ಸದಸ್ಯರಿಗೆ, ಸದಸ್ಯರಾಗಲಿರುವವರಿಗೆ, ನಿರ್ದೇಶಕರುಗಳಿಗೆ, ಪದಾಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಸಹಕಾರ ಶಿಕ್ಷಣ ಮತ್ತು ತರಬೇತಿ ನೀಡುವುದು. |
| | | (iv) | ಸಹಕಾರ ಶಿಕ್ಷಣಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಬಗ್ಗೆ ಸಮನ್ವಯ ಏಜೆನ್ಸಿಯಾಗಿ ವರ್ತಿಸುವುದು ಮತ್ತು ಸಹಕಾರ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಪರಿಣತರ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು; |
| | | (v) | ಸಹಕಾರ ಚಳುವಳಿಗೆ ಸಂಬಂಧಪಟ್ಟ ವಿವಿಧ ವಿಷಯಗಳ ಮೇಲೆ ಅಧಿಕಾರೇತರ ಅಭಿಪ್ರಾಯವನ್ನು ರೂಪಿಸುವ ಮತ್ತು ಅದನ್ನು ಯುಕ್ತ ವೇದಿಕೆಗಳಲ್ಲಿ ನಿರೂಪಿಸುವ ಕೇಂದ್ರವಾಗಿ ಕಾರ್ಯನಿರ್ವಹಿಸುವುದು ಮತ್ತು ಸಹಕಾರ ವಿಷಯಗಳ ಬಗ್ಗೆ ಅಭಿಪ್ರಾಯ ಪ್ರತಿಪಾದಕನಾಗಿ ನಿರ್ವಹಿಸುವುದು. ಅಂತಹ ವಿಷಯಗಳ ಬಗ್ಗೆ ಪ್ರಚಾರ ನಡೆಸುವುದು ಮತ್ತು ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವುದು; |
| | | (vi) | ಸಹಕಾರ ಅಭಿವೃದ್ಧಿಯ ಯೋಜನೆಗಳನುಸಾರ ಎಲ್ಲಾ ವಿಧದ ಸಹಕಾರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಹಾಗೂ ತಾಂತ್ರಿಕ ಮತ್ತು ಇತರ ಮಾರ್ಗದರ್ಶನ ಮತ್ತು ಸಹಾಯ ಒದಗಿಸುವ ಮೂಲಕ ರಾಜ್ಯದಲ್ಲಿನ ಸಹಕಾರ ಸಂಘಗಳನ್ನು ಬಲವರ್ಧಿಸುವುದು. |
| | | (vii) | ರಾಜ್ಯದಲ್ಲಿನ ವಿವಿಧ ಸಹಕಾರ ಸಂಘಗಳ ಪರಸ್ಪರ ಪ್ರಯೋಜನಕ್ಕಾಗಿ ಅವುಗಳ ಬಗ್ಗೆ ಸಮನ್ವಯವನ್ನು ಉಂಟು ಮಾಡುವುದು. |
| | | (viii) | ಭಾರತದ ರಾಷ್ಟ್ರೀಯ ಸಹಕಾರ ಒಕ್ಕೂಟದೊಡನೆ ಸಂಪರ್ಕ ಇಟ್ಟುಕೊಳ್ಳುವುದು ಮತ್ತು ಸಹಕಾರ ಚಳುವಳಿಯ ಅಭಿವೃದ್ಧಿಗಾಗಿ ರಾಷ್ಟ್ರೀಯ ಸಹಕಾರ ಒಕ್ಕೂಟ ಮತ್ತು ಭಾರತದ ಸಹಕಾರ ಕಾಂಗ್ರೆಸ್ ಅಳವಡಿಸಿಕೊಳ್ಳುವ ನೀತಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅನುಷ್ಠಾನಗೊಳಿಸುವುದು. |
| | | (ix) | ಗ್ರಂಥಾಲಯಗಳನ್ನು ಮತ್ತು ವಾಚನಾಲಯಗಳನ್ನು ತೆರೆಯುವುದು ಹಾಗೂ ಸಾಮಾನ್ಯವಾಗಿ ಸಾಹಿತ್ಯದ ಬಗ್ಗೆ ವಿಶೇಷತಃ ಸಹಕಾರ, ಗ್ರಾಮೀಣಾಭಿವೃದ್ಧಿ ಮತ್ತು ತತ್ಸಂಬಂಧಿತ ವಿಷಯಗಳ ಬಗ್ಗೆ ನಿಯತಕಾಲಿಕ ಪತ್ರಿಕೆಗಳನ್ನು, ಪುಸ್ತಕಗಳನ್ನು, ಕರಪತ್ರಗಳನ್ನು ಪ್ರಕಟಿಸುವುದು ಅಥವಾ ಪ್ರಕಟಣೆಗೆ ವ್ಯವಸ್ಥೆ ಮಾಡುವುದು, ಖರೀದಿಸುವುದು ಮತ್ತು ಮಾರಾಟ ಮಾಡುವುದು. ಸಹಕಾರ ಮತ್ತು |

ತತ್ಸಂಬಂಧಿತ ವಿಷಯಗಳ ಮೇಲೆ ಚಲನಚಿತ್ರ, ಫಿಲಮು ಸುರಳಿ, ಮತ್ತು ಸಾಕ್ಷ್ಯಚಿತ್ರಗಳನ್ನೊಳಗೊಂಡ ಶ್ರವಣ-ದೃಶ್ಯ ಸಾಮಗ್ರಿಗಳನ್ನು /ಸಲಕರಣೆಗಳನ್ನು ಉತ್ಪಾದಿಸಲು ವ್ಯವಸ್ಥೆ ಮಾಡುವುದು ಮತ್ತು ಸಹಕಾರ ಪ್ರಚಾರದ ವಾಹನಗಳನ್ನು ನಿರ್ವಹಿಸುವುದು ಅಥವಾ ನಿರ್ವಹಿಸುವಂತೆ ನೋಡಿಕೊಳ್ಳುವುದು.

(x) ಸಹಕಾರ ಸಂಸ್ಥೆಗಳಿಗೆ ಸೇರಿದ ಕಿರು ಅರಣ್ಯ ಉತ್ಪನ್ನಗಳ ಮತ್ತು ಸಂಸ್ಕರಣ ಘಟಕಗಳ, ಕೃಷಿ, ಗುಡಿ ಕೈಗಾರಿಕೆಗಳ, ಗ್ರಾಮೀಣ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಂಬಂಧಿಸಿದ ವಸ್ತುಗಳ/ಲೇಖನಗಳ ಪ್ರದರ್ಶನ ಏರ್ಪಡಿಸುವುದು.

(xi) ಸಹಕಾರ ತರಬೇತಿ ಕೇಂದ್ರ, ಶಾಲೆ ಮತ್ತು ಕಾಲೇಜುಗಳನ್ನು ನಡೆಸುವುದು ಹಾಗೂ ಅವುಗಳು ನಿಗದಿತ ತರಬೇತಿ ಕೋರ್ಸ್‌ಗಳನ್ನು ನಡೆಸಿ, ಸೂಚನೆಗಳನ್ನು ನೀಡಿ, ಪರೀಕ್ಷೆಗಳನ್ನು ನಡೆಸಿ ಮತ್ತು ಡಿಪ್ಲೊಮೋಗಳನ್ನು ಮತ್ತು ಪ್ರಮಾಣ ಪತ್ರಗಳನ್ನು ನೀಡಲು ವ್ಯವಸ್ಥೆ ಮಾಡುವುದು.

(xii) ಅಂತರ ಸಹಕಾರ ಸಂಬಂಧಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಹಕಾರ ಚಳುವಳಿಯ ವಿವಿಧ ಕ್ಷೇತ್ರಗಳ ಸಮನ್ವಯ ಕಾರ್ಯಾಚರಣೆಗೆ ನೆರವು ನೀಡುವುದು;

(xiii) ರಾಜ್ಯಮಟ್ಟದ / ರಾಷ್ಟ್ರ ಮಟ್ಟದ ಸಹಕಾರ ಸಮ್ಮೇಳನಗಳನ್ನು, ವಿಚಾರ ಸಂಕಿರಣಗಳನ್ನು, ಸಭೆಗಳನ್ನು, ಕಾರ್ಯಾಗಾರಗಳನ್ನು, ಪ್ರದರ್ಶನಗಳನ್ನು ಮತ್ತು ಪ್ರೌಢಶಾಲೆಗಳ, ಕಾಲೇಜುಗಳ ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಸಲುವಾಗಿ ಪ್ರಬಂಧ ಲೇಖನ, ಚರ್ಚೆ ಇತ್ಯಾದಿ ಸ್ಪರ್ಧೆಗಳನ್ನು ನಡೆಸುವುದು;

(xiv) ಮಹಾಮಂಡಳದ ಉದ್ದೇಶಗಳನ್ನು ಸಾಧಿಸಲು ಅವಶ್ಯವಾದ ಸ್ಥಿರಾಸ್ತಿಗಳನ್ನು, ಸಾಮಾನ್ಯ ಸಭೆಯ ಅನುಮೋದನೆಯೊಂದಿಗೆ, ಮಾರಾಟ, ಗುತ್ತಿಗೆ, ಬದಲಾವಣೆ ಅಥವಾ ಅನ್ಯಥಾ ರೂಪದಲ್ಲಿ ಆರ್ಜಿಸಿಕೊಳ್ಳುವುದು, ಖರೀದಿಸುವುದು, ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು ಅಥವಾ ಮಾರಾಟ ಮಾಡುವುದು;

(xv) ಸಾಮಾನ್ಯವಾಗಿ ಗಾಮೀಣಾಭಿವೃದ್ಧಿಗೆ ವಿಶೇಷತಃ ಸಹಕಾರ ಕ್ಷೇತ್ರಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಅಧ್ಯಯನ ಮತ್ತು ಸಂಶೋಧನಾ ನಡೆಸಲು ಪ್ರೋತ್ಸಾಹಿಸುವುದು ಹಾಗೂ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳ ಸಾಮಾಜಿಕ, ಆರ್ಥಿಕ ಸರ್ವೇಕ್ಷಣೆಗಳನ್ನು ನಡೆಸುವುದು ಮತ್ತು ಸಲಹೆ, ಮೌಲ್ಯಮಾಪನ ಇತ್ಯಾದಿ ಕೆಲಸಗಳನ್ನು ತೆಗೆದುಕೊಳ್ಳುವುದು;

(xvi) ಪಠ್ಯ ಪುಸ್ತಕಗಳು, ನಿಯತಕಾಲಿಕೆಗಳು (ಮ್ಯಾಗಜೈನ್), ಇತರೆ ಪುಸ್ತಕಗಳು ಮತ್ತು ಸಹಕಾರ ಸಂಘಗಳ ಇತರೆ ಅಗತ್ಯತೆಗಳನ್ನೊಳಗೊಂಡಂತೆ ಪುಸ್ತಕಗಳನ್ನು, ನಿಯತಕಾಲಿಕೆ (ಜರ್ನಲ್) ಗಳನ್ನು ಮತ್ತು ವೃತ್ತ ಪತ್ರಿಕೆಗಳನ್ನು ಮುದ್ರಿಸುವ ಸಲುವಾಗಿ ಮುದ್ರಣ ಘಟಕವನ್ನು ಸ್ಥಾಪಿಸುವುದು;

(xvii) ಈ ಉಪವಿಧಿಗಳನ್ವಯ ಮತ್ತು ಮಂಡಳಿ ಕಾಲಕಾಲಕ್ಕೆ ರೂಪಿಸಿದ ಪೂರಕ ನಿಯಮಗಳನ್ವಯ ಕಾರ್ಪಸ್ ನಿಧಿಯನ್ನು ಒಳಗೊಂಡಂತೆ ನಿಧಿಗಳನ್ನು ಕೂಡಿಸುವುದು ಮತ್ತು ಹಾಗೆ ಕೂಡಿಸಲ್ಪಟ್ಟ ನಿಧಿಗಳನ್ನು ನಿರ್ವಹಿಸುವುದು;

(xviii)ಸಹಕಾರ ಚಳುವಳಿಗೆ ಸಂಬಂಧಪಟ್ಟ ವಿಷಯಗಳ ಮೇಲೆ ಆಗಿಂದಾಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು;

(xix) ಜಿಲ್ಲಾ ಸಹಕಾರ ಒಕ್ಕೂಟಗಳ ಕೆಲಸ ಕಾರ್ಯಗಳನ್ನು ಪರಿವೀಕ್ಷಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು ಹಾಗೂ ಅವುಗಳ ಹಿತವನ್ನು ಪ್ರತಿನಿಧಿಸುವುದು;

(xx) ಮಹಾಮಂಡಳದ ಆರ್ಥಿಕ ಪರಿಸ್ಥಿತಿ, ಆಯವ್ಯಯ ಹಂಚಿಕೆ ಮತ್ತು ಕೊಡುವ ಸಾಮರ್ಥ್ಯದ ಆಧಾರದ ಮೇಲೆ ಜಿಲ್ಲಾ ಸಹಕಾರಿ ಒಕ್ಕೂಟಗಳಿಗೆ ಹೊಸ ಕಟ್ಟಡಗಳ ನಿರ್ಮಾಣಕ್ಕಾಗಿ ಬಡ್ಡಿ ರಹಿತ ಸಾಲ ಮತ್ತು ಸಹಾಯಧನವನ್ನು ಕೊಡುವುದು.

(xxi) ಭಾರತದ ರಾಷ್ಟ್ರೀಯ ಸಹಕಾರ ಒಕ್ಕೂಟ ಅಥವಾ ರಾಜ್ಯ ಸರ್ಕಾರ / ರಿಜಿಸ್ಟ್ರಾರು ಮಹಾಮಂಡಳಕ್ಕೆ ವಹಿಸುವಂಥ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದು;

(xxii) ರಾಜ್ಯದ ಸಹಕಾರಿಗಳು ಅಂತಹ ಸ್ಥಳಗಳಲ್ಲಿನ ಸಹಕಾರ ಅಭಿವೃದ್ಧಿಯ ನೇರವಾದ ಜ್ಞಾನವನ್ನು ಹೊಂದಲು ಅನುಕೂಲವಾಗುವಂತೆ, ಅಗತ್ಯವಿದ್ದಲ್ಲಿ, ರಾಜ್ಯದ ಹೊರಗಡೆ ಮತ್ತು ದೇಶದ ಹೊರಗಡೆ ಅಧ್ಯಯನ ಪ್ರವಾಸಗಳನ್ನು ವ್ಯವಸ್ಥೆ ಮಾಡುವುದು;

(xxiii)ಅಗತ್ಯಪಡಿಸಿದಲ್ಲಿ, ಸಹಕಾರ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಪದೋನ್ನತಿ ಉದ್ದೇಶಕ್ಕಾಗಿ ಪರೀಕ್ಷೆಗಳನ್ನು ನಡೆಸುವುದು;

(xxiv)ಮಹಾಮಂಡಳದ ಉದ್ದೇಶಗಳ ಸಾಧನೆಗೆ ಅನುಕೂಲಕರವಾದಂತಹ ಮತ್ತು ಪ್ರಾಸಂಗಿಕವಾದಂತಹ ಇತರೆ ಎಲ್ಲಾ ಬಗೆಯ ಚಟುವಟಿಕೆಗಳನ್ನು ನಿರ್ವಹಿಸುವುದು;

ಇದರ ವ್ಯಾಪ್ತಿಯಲ್ಲಿ ಬರುವ ಇತರೆ ಸಂಸ್ಥೆಗಳು:

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧೀನದಲ್ಲಿ ಎಂಟು (8) ಕರ್ನಾಟಕ ಇನ್ಸ್‌ಸ್ಟಿಟ್ಯೂಟ್ ಆಫ್ ಕೋ-ಆಪ್ ಮ್ಯಾನೇಜ್‌ಮೆಂಟ್ (ಕೆ.ಐ.ಸಿ.ಎಂ.) ಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಮೂಲಕ ಅಭ್ಯರ್ಥಿಗಳಿಗೆ ಪ್ರತಿ 6 ತಿಂಗಳಿಗೊಮ್ಮೆ ರೆಗ್ಯೂಲರ್ ಡಿ.ಸಿ.ಎಂ. ಕೋರ್ಸನ್ನು ಹಾಗೂ ಸಹಕಾರ ಸಂಘ/ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ದೂರ ಶಿಕ್ಷಣದ ಮೂಲಕ ಪ್ರತಿ 6 ತಿಂಗಳಿಗೊಮ್ಮೆ ಡಿ.ಸಿ.ಎಂ ಕೋರ್ಸನ್ನು ನಡೆಸಿ, ಡಿಪ್ಲೋಮ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ. ವಿವರ ಕೆಳಕಂಡಂತಿದೆ.

| | |
|---|---|
| 1) ಕೆ.ಐ.ಸಿ.ಎಂ., ಬೆಂಗಳೂರು | 5) ಕೆ.ಐ.ಸಿ.ಎಂ., ಮೂಡಬಿದ್ರೆ |
| 2) ಕೆ.ಐ.ಸಿ.ಎಂ., ಶಿವಮೊಗ್ಗ | 6) ಕೆ.ಐ.ಸಿ.ಎಂ., ಧಾರವಾಡ |
| 3) ಕೆ.ಐ.ಸಿ.ಎಂ. ಮೈಸೂರು | 7) ಕೆ.ಐ.ಸಿ.ಎಂ., ಬೆಳಗಾವಿ |
| 4) ಕೆ.ಐ.ಸಿ.ಎಂ. ಮಡಿಕೇರಿ | 8) ಕೆ.ಐ.ಸಿ.ಎಂ., ಕಲಬುರಗಿ |

| | | |
|---|---|---|
| ಇ | ಈ ಸಂಸ್ಥೆಯು ಯಾವ ಯಾವ ವ್ಯವಹಾರಗಳಿಗಾಗಿ '4ಜಿ ವಿನಾಯಿತಿ'ಯನ್ನು ಯಾವಾಗ ಪಡೆಯಲಾಗಿದೆ (ಅದರ ಪ್ರತಿಯನ್ನು ಒದಗಿಸುವುದು) | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಯಾವುದೇ '4ಜಿ ವಿನಾಯಿತಿ' ಪಡೆದಿರುವುದಿಲ್ಲ. |
| ಈ | ಕಳೆದ 3 ವರ್ಷಗಳಿಂದ ಈ ಸಂಸ್ಥೆಯು ನಡೆಸಿರುವ ವ್ಯವಹಾರಗಳೇನು: ಈ ಸಂಸ್ಥೆಗೆ ಬಂದ ಲಾಭವೆಷ್ಟು (ವಿವರವಾದ ಮಾಹಿತಿಯನ್ನು ನೀಡುವುದು) | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಯಾವುದೇ ವ್ಯವಹಾರವನ್ನು ನಡೆಸುವಂತಹ ಸಂಸ್ಥೆಯಲ್ಲ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಮೂಲ ಉದ್ದೇಶದಂತೆ ರಾಜ್ಯದಾದ್ಯಂತ ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.<br>ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಲಾಭ ಗಳಿಸುವ ಸಂಸ್ಥೆಯಾಗಿರುವುದಿಲ್ಲ. ಆದರೆ ಸಹಕಾರ ಶಿಕ್ಷಣ ನಿಧಿ ಮತ್ತು ಮಹಾಮಂಡಳದ ಇತರೆ ಆದಾಯಗಳಲ್ಲಿ ಉಳಿಕೆಯಾದ ಮೊತ್ತ ಈ ಕೆಳಕಂಡಂತಿದೆ. |

| ವರ್ಷ | ಸಹಕಾರ ಶಿಕ್ಷಣ ನಿಧಿ ಮತ್ತು ಇತರೆ ಮೂಲಗಳಿಂದ (ರೂ.) |
|---|---|
| 2017-18 | 1,02,52,301.06 |
| 2018-19 | 6,46,751.27 |
| 2019-20 | 34,95,199.50 |

| | | |
|---|---|---|
| ಉ | ಜನತಾ ಬಜಾರ್ ಅಂದರೇನು: ಇವುಗಳು ಈಗಲೂ ಅಸ್ತಿತ್ವದಲ್ಲಿ ಇದೆಯೇ: (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ಜನತಾ ಬಜಾರ್ ಎಂದರೆ, ಸದಸ್ಯ ಗ್ರಾಹಕರಿಗೆ ದಿನನಿತ್ಯದ ಅಗತ್ಯ ವಸ್ತುಗಳನ್ನು ಸ್ಪರ್ಧಾತ್ಮಕ ದರದಲ್ಲಿ ಪೂರೈಸಲು ಗ್ರಾಹಕರನ್ನೇ ಕೇಂದ್ರೀಕರಿಸಿ ಸಹಕಾರ ಸಂಘಗಳ ಕಾಯ್ದೆಯಡಿ ನೊಂದಾವಣೆಗೊಂಡ ವ್ಯವಸ್ಥೆಯಾಗಿರುತ್ತದೆ.<br>ರಾಜ್ಯದಲ್ಲಿ ಒಟ್ಟು 27 ಜನತಾ ಬಜಾರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾವಾರು ಮಾಹಿತಿಯನ್ನು ಅನುಭಂದದಲ್ಲಿ ನೀಡಲಾಗಿದೆ. |
| ಊ | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತದ ಆಸ್ತಿಗಳ ಸಂಖ್ಯೆ ಎಷ್ಟು? (ವಿವರವಾದ ಮಾಹಿತಿಯನ್ನು ನೀಡುವುದು) | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಈ ಕೆಳಕಂಡಂತೆ ಆಸ್ತಿಗಳು ಹೊಂದಿರುತ್ತವೆ. |

| ಕ್ರ. ಸಂ | ಆಸ್ತಿಗಳ ವಿವರ | ಪ್ರಮಾಣ ಗುಂಟೆ/ಅಡಿ | ಸರ್ವೆ ನಂ / ವಾರ್ಡ್ ನಂ |
|---|---|---|---|
| 1. | ಕೇಂದ್ರ ಕಚೇರಿ ಕಟ್ಟಡ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ನಂ:32, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು. | 16720 ಚದರಡಿ ನಿವೇಶನದಲ್ಲಿ 3 ಅಂತಸ್ತಿನ ಕಟ್ಟಡ | ಸೈ.ನಂ: 32, ವಾರ್ಡ್ ನಂ: 77, ರೇಸ್ ಕೋರ್ಸ್ ರಸ್ತೆ, (ಡಿ.ದೇವರಾಜ್ ಅರಸ್ ರಸ್ತೆ) ಬೆಂಗಳೂರು 560001 |
| 2. | ನೆಲಮಂಗಲ ಬೆಂಗಳೂರು ಗ್ರಾಮಾಂತರ ಜಿಲ್ಲೆ | 3ಎಕರೆ 20 ಗುಂಟೆ ಖಾಲಿ ಜಮೀನು | 153/2ಎ, 153/2ಬಿ, 153/3 ಸೊಂಡೆಕೊಪ್ಪರಸ್ತೆ, ಬಸವಣ್ಣದೇವರ ಮಠ ಮುಂಭಾಗ, ನೆಲಮಂಗಲ. |

| | | | | | |
|---|---|---|---|---|---|
| | | 3. | ಸಹಕಾರ ತರಬೇತಿ ಕೇಂದ್ರ, ಮಡಿಕೇರಿ | 1 ಎಕರೆ 25 ಗುಂಟೆ ಜಮೀನಿನಲ್ಲಿ ಸಹಕಾರ ತರಬೇತಿ ಕೇಂದ್ರ ಮತ್ತು ವಸತಿನಿಲಯದ ಕಟ್ಟಡ ಇರುತ್ತದೆ. | ಕರ್ಣಂಗೇರಿ ಗ್ರಾಮದ ಮಡಿಕೇರಿ ಪುರಸಭೆ ಬ್ಲಾಕ್ ನಂ: 24ರ ಸರ್ವೇ ನಂ:44/10ಎ |
| | | 4. | ಸಹಕಾರ ತರಬೇತಿ ಕೇಂದ್ರ, ಮೂಡಬಿದ್ರೆ | 2 ಎಕರೆ 25 ಗುಂಟೆ ಜಮೀನಿನಲ್ಲಿ ಸಹಕಾರ ತರಬೇತಿ ಕೇಂದ್ರ ಮತ್ತು ವಸತಿನಿಲಯದ ಕಟ್ಟಡ ಇರುತ್ತದೆ. | 84/1ಎ ಪ್ರಾಂತ್ಯ ಗ್ರಾಮ, ಮೂಡಬಿದ್ರೆ |
| | | 5. | ಸಹಕಾರ ತರಬೇತಿ ಕೇಂದ್ರ, ಮೈಸೂರು | 29520 ಚ.ಅ. ನಿವೇಶನದಲ್ಲಿ ಸಹಕಾರ ತರಬೇತಿ ಕೇಂದ್ರ ಕಟ್ಟಡ | 1ನೇ ವಾರ್ಡ್‌ಕಿಲ್ಲೆ ಮೊಹಲ್ಲಾ ಚಾಮರಾಜಜೋಡಿ ರಸ್ತೆ, ನಂ: 68 ಎಫ್ 11, 68 ಎಫ್ 11/1, 68 ಎಫ್ 11/4. |
| | | 6. | ಸಹಕಾರ ತರಬೇತಿ ಕೇಂದ್ರ, ಶಿವಮೊಗ್ಗ | 30 ಗುಂಟೆ ಜಮೀನಿನಲ್ಲಿ ಸಹಕಾರ ತರಬೇತಿ ಕೇಂದ್ರ ಮತ್ತು ವಸತಿನಿಲಯದ ಕಟ್ಟಡ ಇರುತ್ತದೆ. | ನಂ: 429, ವಿನೋಬನಗರ, 1ನೇ ಹಂತ, 2ನೇ ಬ್ಲಾಕ್, ಶಿವಮೊಗ್ಗ |
| | | 7. | ಸಹಕಾರ ತರಬೇತಿ ಕೇಂದ್ರ, ಗುಲಬರ್ಗಾ | 1ಎಕರೆ 20 ಗುಂಟೆ ಜಮೀನಿನಲ್ಲಿ ಸಹಕಾರ ತರಬೇತಿ ಕೇಂದ್ರ ಮತ್ತು ವಸತಿನಿಲಯದ ಕಟ್ಟಡ ಇರುತ್ತದೆ. | ಸರ್ವೆ ನಂ 74/1 ಆದರ್ಶನಗರ, ಸೇಡಂ ರಸ್ತೆ, ಗುಲಬರ್ಗಾ |
| | | 8. | ಬೆಳಗಾವಿ ಸಹಕಾರ ತರಬೇತಿ ಕೇಂದ್ರ | 3601ಚ.ಮೀ. ಜಮೀನಿನಲ್ಲಿ ಸಹಕಾರ ತರಬೇತಿ ಕೇಂದ್ರ ಮತ್ತು ವಸತಿನಿಲಯದ ಕಟ್ಟಡ ಇರುತ್ತದೆ. | ಬೆಳಗಾವಿ ನಗರದ ರಾಮತೀರ್ಥನಗರದಲ್ಲಿರುವ ಕಣಬರ್ಗಿ ಗ್ರಾಮದ ಸರ್ವೇ ನಂ:555 ಮತ್ತು 559ರ ನಿವೇಶನ |

| | | | | | |
|---|---|---|---|---|---|
| | | 9. | ಶ್ರೀರಾಮಪುರ ನಿವೇಶನ, ಬೆಂಗಳೂರು | 19500 ಚ.ಮೀ ಖಾಲಿ ನಿವೇಶನದಲ್ಲಿ ಕಟ್ಟಡದ ಕಾಮಗಾರಿ ಪ್ರಗತಿಯಲ್ಲಿದೆ. | ಸೈಟ್ ನಂ: 1409/1, 1409/2, 7ನೇ ಕ್ರಾಸ್, 7ನೇ ಮುಖ್ಯರಸ್ತೆ, ಶ್ರೀರಾಮಪುರ, ಬೆಂಗಳೂರು. |
| | | 10. | ಧಾರವಾಡ ಕೆ.ಐ.ಸಿ.ಎಂ. ತರಬೇತಿ ಸಂಸ್ಥೆಗೆ ಕಟ್ಟಡವುಳ್ಳ ನಿವೇಶನ | 15312 ಚದರಡಿ ಜಾಗದಲ್ಲಿ ಎರಡು ಅಂತಸ್ತಿನ ಕಟ್ಟಡ ಇರುತ್ತದೆ. | ಸಿ.ಟಿ.ಎಸ್-4/43ಎ, ಸರಸ್ವತಿಪುರ, ಲಕ್ಕಮ್ಮನಹಳ್ಳಿ,ಧಾರವಾಡ. |

**ಕಡತ ಸಂಖ್ಯೆ ಸಿಒ 155 ಸಿಸಿಬಿ 2021**

**(ಎಸ್. ಟಿ. ಸೋಮಶೇಖರ್)**
ಸಹಕಾರ ಸಚಿವರು

ಅನುಬಂಧ

## ರಾಜ್ಯದಲ್ಲಿರುವ ಜಿಲ್ಲಾ ಕೇಂದ್ರ ಸಗಟು ಮಾರಾಟ ಸಹಕಾರ ಸಂಘಗಳು (ಜನತಾ ಬಜಾರ್)

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಜನತಾ ಬಜಾರ್ ಹೆಸರುಗಳು |
|---|---|---|
| 1. | ಬೆಂಗಳೂರು | ರಾಜಾಜಿನಗರ ಸಹಕಾರ ಸಂಘ ನಿ.,<br>ಭಾಷ್ಯಂ ಸರ್ಕಲ್, ರಾಜಾಜಿನಗರ, ಬೆಂಗಳೂರು. |
| 2. | ಬೆಂಗಳೂರು | ಬಸವನಗುಡಿ ಸಹಕಾರ ಸಂಘ ನಿ.,<br>ಬಸವನಗುಡಿ, ಬೆಂಗಳೂರು. |
| 3. | ದಾವಣಗೆರೆ | ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆ ನಿ.,<br>(ಜನತಾ ಬಜಾರ್) ದಾವಣಗೆರೆ. |
| 4. | ಶಿಕಾರಿಪುರ | ಜಿಲ್ಲಾ ಬಸವೇಶ್ವರ ಗ್ರಾಹಕರ ಸಗಟು ಮಾರಾಟ ಸಹಕಾರ ಸಂಘ ನಿ., |
| 5. | ಮೈಸೂರು | ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಗಟು<br>ಮಾರಾಟ ಸಹಕಾರ ಸಂಘ ನಿ., ಮೈಸೂರು |
| 6. | ಹಾಸನ | ಹಾಸನ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಸ್ಥೆ ನಿ., |
| 7. | ಚಿಕ್ಕಮಗಳೂರು | ಚಿಕ್ಕಮಗಳೂರು ಜಿಲ್ಲಾ ಕೇಂದ್ರ ಸಗಟು ಮಾರಾಟ ಸಹಕಾರ ಸಂಘ<br>ನಿ., |
| 8. | ಕೊಡಗು | ಕೊಡಗು ಜಿಲ್ಲಾ ಕೇಂದ್ರ ಸಗಟು ಮಾರಾಟ ಸಹಕಾರ ಸಂಘ ನಿ., |
| 9. | ದಕ್ಷಿಣ ಕನ್ನಡ | ದ.ಕ.ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ನಿ, ಮಂಗಳೂರು |
| 10. | ಬೆಳಗಾವಿ | ಬೆಳಗಾವಿ ಗ್ರಾಹಕರ ಸಹಕಾರಿ ಸಗಟು ಮಾರಾಟ ಮಳಿಗೆ ನಿ, ಬೆಳಗಾವಿ |
| 11. | ವಿಜಯಪುರ | ವಿಜಯಪುರ ಸೆಂಟ್ರಲ್ ಕೋ0ಆಪರೇಟ್ಟೀವ್ ಹೋಲಸೇಲ ಸ್ಟೋರ್ಸ್ ಲಿ<br>(ಜನತಾ ಬಜಾರ್) ನಿ, ವಿಜಯಪುರ |
| 12. | ಬಾಗಲಕೋಟ | ಬಿ.ಡಿ.ಸಿ.ಡಬ್ಲ್ಯೂ.ಎಸ್(ಜನತಾ ಬಜಾರ) ನಿ., ಬಾಗಲಕೋಟ |
| 13. | ಜಮಖಂಡಿ | ಜಮಖಂಡಿ ಉಪವಿಭಾಗ ದಿ ಜನತಾ ಕಂಝುಮರ್ ಕೋ ಆಪ್<br>ಹೋಲಸೇಲ್ ಸ್ಟೋರ್ ಲಿ., ಜಮಖಂಡಿ (ಜನತಾ ಬಜಾರ) |
| 14. | ಹುಬ್ಬಳ್ಳಿ | ಸಿ.ಸಿ.ಡಬ್ಲೂ ಸ್ಟೋರ್ಸ್.<br>ಹುಬ್ಬಳ್ಳಿ |
| 15. | ನವಲಗುಂದ | ದಿ.ಕಂಜುಮರ್ಸ್ ಕೋ. ಆಫ<br>ಹೊಲಸೇಲ್ ನವಲಗುಂದ |
| 16. | ಗದಗ | ಸಿ.ಸಿ.ಡಬ್ಲ್ಯೂ ಸ್ಟೋರ್ಸ್ ಗದಗ |

| | | |
|---|---|---|
| 17. | ನರಗುಂದ | ಸಿ.ಸಿ.ಡಬ್ಲ್ಯೂ ಸ್ಟೋರ್ಸ್<br>ನರಗುಂದ |
| 18. | ಶಿರಹಟ್ಟಿ | ಸಿ.ಸಿ.ಡಬ್ಲ್ಯೂ ಸ್ಟೋರ್ಸ್<br>ಶಿರಹಟ್ಟಿ |
| 19. | ಹಾವೇರಿ | ತಾಲೂಕಾ ಗ್ರಾಹಕಾರ ಸಗಟು ಮಾರಾಟ ಮಳಿಗೆ ಹಾವೇರಿ |
| 20. | ಹಿರೇಕೆರೂರ | ತಾಲೂಕಾ ಕೋ-ಆಪ್ ಹೋಲ್ ಸೇಲ್ ಸ್ಟೋರ್ಸ ಹಿರೇಕೆರೂರ |
| 21. | ಶಿಗ್ಗಾಂವ | ಜನತಾ ಬಜಾರ, ಶಿಗ್ಗಾಂವ |
| 22. | ಶಿರಸಿ | ಕೇಂದ್ರ ಸಗಟು ಮಾರಾಟ ಮಳಿಗೆ ನಿ, (ಜನತಾ ಬಜಾರ್) ಶಿರಸಿ, ತಾ : ಶಿರಸಿ |
| 23. | ಕಾರವಾರ | ಸೆಂಟ್ರಲ್ ಕೋ-ಆಪರೇಟಿವ್ ಹೋಲಸೇಲ ಸ್ಟೋರ್ಸ್ ಲಿ., ಕಾರವಾರ (ಉ.ಕ) |
| 24. | ಬಳ್ಳಾರಿ | ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ನಿ., (ಜನತಾ ಬಜಾರ್) ಬಳ್ಳಾರಿ. |
| 25. | ಬೀದರ್ | ಬೀದರ್ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ನಿ., ಲಾಳ್ಟಹದ್ದೂರ ಜನತಾ ಬಜಾರ್, ಬೀದರ್. |
| 26. | ಕಲಬ ುರಗಿ | ಜನತಾ ಬಜಾರ್, ಕಲಬುರಗಿ |
| 27. | ಯಾದಗಿರಿ | ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾ5ರಾಟ ಸಂಘ ನಿ., ಯಾದಗಿರಿ. |

ಸಹಕಾರ ಸಂಘಗಳ ಸಹಾಯಕ ನಿಬಂಧಕರು
(ಕೈಗಾರಿಕಾ ಸಹಕಾರ ಸಂಘಗಳು)
ಸಹಕಾರ ಸಂಘಗಳ ನಿಬಂಧಕರ ಕಛೇರಿ
ನಂ.1, ಅಲಿ ಆಸ್ಕರ್ ರಸ್ತೆ ಬೆಂಗಳೂರು-[illegible]